<u>ಅಸಲು ದಾವಾ ಸಂಖ್ಯೆ **-225/2022**</u> ಪಿ.ಡಬ್ಲ್ಯೂ.**:-1**

ದಿನಾಂಕಃ **07-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು **:- 1** ರಿಂದ **3** ನೇ ಪ್ರತಿವಾದಿ ಪರ ವಕೀಲರಿಂದ **:-**</u>

1 ರಿಂದ 3 ನೇ ಪ್ರತಿವಾದಿಗಳು ನಮ್ಮ ಊರಿನವರು. 2 ಮತ್ತು 3 ನೇ ಪ್ರತಿವಾದಿಗಳ ತಂದೆಯ ಹೆಸರು ರಾಮನಾಯ್ಕ ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳ ತಂದೆಯ ಹೆಸರು ರಾಮನಾಯ್ಕ ಎಂದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮನಾಯ್ಕನ ಹೆಂಡತಿ 1 ನೇ ಪ್ರತಿವಾದಿ, 2 ಮತ್ತು 3 ನೇ ಪ್ರತಿವಾದಿ, ಚಂದ್ರನಾಯ್ಕ, ರೇವಣನಾಯ್ಕ, ಪುಷ್ಪಬಾಯಿ ರವರು ರಾಮನಾಯ್ಕನ ಮಕ್ಕಳ ಎಂದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮನಾಯ್ಕನ ತಮ್ಮನ ಹೆಸರು ಹನುಮಂತನಾಯ್ಕ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹೊನ್ನಾಳಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಖಾತೆ ಬದಲಾವಣೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದೇನು ಎಂದರೆ ಸರಿ. ಈ ದಾವೆಯು ನ್ಯಾಯಾಲಯದಲ್ಲಿ ಚಾಲ್ತಿಯಿರುವ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ಅರ್ಜಿಯಲ್ಲಿ ಪ್ರಸ್ತುತ ದಾವೆಯ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.